24

ರಮದಾನ್
ಕೆಲವು ಫತ್ವಾಗಳು

ಶೈಖ್ ಅಬ್ದುಲ್ ಅಝೀಝ್ ಇಬ್ನ್ ಬಾಝ್

مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ರಮದಾನ್ ತಿಂಗಳನ್ನು ಗುರುತಿಸಲು ಕ್ಯಾಲೆಂಡರ್ ಅವಲಂಬಿಸಬಹುದೇ?

ಸಹೀಹಾದ ಹದೀಸ್‌ಗಳ ಪ್ರಕಾರ ರಮದಾನ್ ತಿಂಗಳನ್ನು ಗುರುತಿಸಲು ಚಂದ್ರದರ್ಶನವನ್ನು ಅವಲಂಬಿಸುವುದು ಅಥವಾ ಶಅ್‌ಬಾನ್ ತಿಂಗಳ ಮೂವತ್ತು ದಿನಗಳು ಪೂರ್ಣವಾಗುವುದು ಕಡ್ಡಾಯವಾಗಿದೆ. ಹಾಗಾದರೆ ರಮದಾನ್ ತಿಂಗಳನ್ನು ಮತ್ತು ಈದ್ ದಿನವನ್ನು ಗುರುತಿಸಲು ಕ್ಯಾಲೆಂಡರನ್ನು ಅವಲಂಬಿಸುವುದು ತಪ್ಪೇ?

ಉತ್ತರ: ರಮದಾನ್ ತಿಂಗಳನ್ನು ಆರಂಭಿಸಲು ಮತ್ತು ಕೊನೆಗೊಳಿಸಲು ಕ್ಯಾಲೆಂಡರನ್ನು ಅವಲಂಬಿಸಬಾರದು. ಕಾರಣ, ಅದು ಸಹೀಹಾದ ಹದೀಸ್‌ಗಳಿಗೆ ವಿರುದ್ಧವಾಗಿದೆ. ಈ ವಿಷಯದಲ್ಲಿ ಚಂದ್ರದರ್ಶನವನ್ನು ಮಾತ್ರ ಅವಲಂಬಿಸಬೇಕು.

ಪ್ರವಾದಿ(ಸ) ರವರು ಹೇಳುತ್ತಾರೆ:

«لَا تَصُومُوا حَتَّى تَرَوُا الْهِلَالَ، وَلَا تُفْطِرُوا حَتَّى تَرَوْهُ، فَإِنْ غُمَّ عَلَيْكُمْ فَأَكْمِلُوا الْعِدَّةَ ثَلَاثِينَ».

"ಚಂದ್ರನನ್ನು ಕಾಣುವ ತನಕ ನೀವು ಉಪವಾಸ ಆರಂಭಿಸಬಾರದು ಮತ್ತು ಚಂದ್ರನನ್ನು ಕಾಣುವ ತನಕ ನೀವು ಉಪವಾಸವನ್ನು ಕೊನೆಗೊಳಿಸಬಾರದು. ಮೋಡಗಳ ಕಾರಣ ನಿಮಗೆ ಚಂದ್ರನನ್ನು ಕಾಣಲಾಗದಿದ್ದರೆ ಮೂವತ್ತು ದಿನಗಳನ್ನು ಪೂರ್ಣಗೊಳಿಸಿರಿ." (ಅಲ್‌ಬುಖಾರಿ ಮತ್ತು ಮುಸ್ಲಿಮ್)

ಪ್ರವಾದಿ(ಸ) ಹೇಳುತ್ತಾರೆ:

«إِنَّا أُمَّةٌ أُمِّيَّةٌ، لَا نَكْتُبُ وَلَا نَحْسُبُ، الشَّهْرُ هَكَذَا وَهَكَذَا».

“ನಾವು ಅನಕ್ಷರಸ್ಥ ಸಮುದಾಯದವರು. ನಾವು ಬರೆ-ಯುವುದೋ ಲೆಕ್ಕ ಮಾಡುವುದೋ ಇಲ್ಲ. ತಿಂಗಳು ಎಂದರೆ ಈ ರೀತಿ, ಈ ರೀತಿ, ಈ ರೀತಿ.” (ಅಲ್‌ಬುಖಾರಿ ಮತ್ತು ಮುಸ್ಲಿಮ್)

ಅವರು ಮೂರನೆ ಬಾರಿ ಹೇಳುವಾಗ ತಮ್ಮ ಹೆಬ್ಬೆರಳ-ನ್ನು ಮಡಚಿದರು. ಅಂದರೆ ತಿಂಗಳು ಇಪ್ಪತ್ತೊಂಬತ್ತು ದಿನಗಳು ಅಥವಾ ಮೂವತ್ತು ದಿನಗಳಾಗಿರಬಹುದು ಎಂದು ಪ್ರವಾದಿ(ಸ) ರವರು ತಮ್ಮ ಬೆರಳುಗಳ ಮೂಲಕ ತೋರಿಸಿದರು.

ಪ್ರವಾದಿ(ಸ) ಹೇಳುತ್ತಾರೆ:

«صُومُوا لِرُؤْيَتِهِ وَأَفْطِرُوا لِرُؤْيَتِهِ، فَإِنْ غُمِّيَ عَلَيْكُمْ فَعُدُّوا ثَلَاثِينَ».

“ಚಂದ್ರನನ್ನು ಕಂಡರೆ ಉಪವಾಸ ಆರಂಭಿಸಿರಿ ಮತ್ತು

ಚಂದ್ರನನ್ನು ಕಂಡರೆ ಉಪವಾಸ ಕೊನೆಗೊಳಿಸಿರಿ. ಮೋಡಗಳ ಕಾರಣ ನಿಮಗೆ ಚಂದ್ರನನ್ನು ಕಾಣಲಾಗದಿದ್ದರೆ ಮೂವತ್ತು ದಿನಗಳನ್ನು ಪೂರ್ಣಗೊಳಿಸಿರಿ.” (ಅಲ್‌ಬುಖಾರಿ ಮತ್ತು ಮುಸ್ಲಿಮ್)

ಇವೆಲ್ಲವೂ ಸಹೀಹಾದ ಹದೀಸ್‌ಗಳು. ಇವು ಅನೇಕ ವಿಧಗಳಲ್ಲಿ ವರದಿಯಾಗಿದ್ದರೂ ಎಲ್ಲವೂ ಒಂದೇ ಅರ್ಥವನ್ನು ಸೂಚಿಸುತ್ತವೆ. ಅಂದರೆ ಈ ಹದೀಸ್‌ಗಳು ಸೂಚಿಸುವ ಪ್ರಕಾರ ಚಂದ್ರದರ್ಶನವನ್ನು ಅಥವಾ ತಿಂಗಳು ಮೂವತ್ತು ದಿನ ಪೂರ್ಣವಾಗುವುದನ್ನು ಅವಲಂಬಿಸಬೇಕು. ಲೆಕ್ಕಾಚಾರಗಳನ್ನು ಅವಲಂಬಿಸಬಾರದು. ಅವಲಂಬನಾರ್ಹ ವಿದ್ವಾಂಸರು ಕೂಡ ಇದೇ ರೀತಿ ಅಭಿಪ್ರಾಯಪಟ್ಟಿದ್ದಾರೆ.

ಪ್ರಯಾಣದಲ್ಲಿರುವವರು ಫಿತ್ರ್ ಝಕಾತನ್ನು

ಏನು ಮಾಡಬೇಕು?

ವಿದೇಶದಲ್ಲಿರುವವರು ಫಿತ್ರ್ ಝಕಾತನ್ನು ಊರಿನ-ಲ್ಲಿರುವ ಬಡವರಿಗೆ ನೀಡಬೇಕೇ ಅಥವಾ ವಿದೇಶದ-ಲ್ಲಿರುವವರಿಗೆ ನೀಡಬಹುದೇ? ಈದ್‌ಗೆ ಮೂರು ದಿನ ಮುಂಚೆ ಪ್ರಯಾಣ ಹೊರಟರೆ ಫಿತ್ರ್ ಝಕಾತನ್ನು ಏನು ಮಾಡಬೇಕು?

ಉತ್ತರ: ಸುನ್ನತ್ತಿನ ಪ್ರಕಾರ ಫಿತ್ರ್ ಝಕಾತನ್ನು ಈದ್ ದಿನದಂದು ಬೆಳಗ್ಗೆ ಊರಿನಲ್ಲಿರುವ ಬಡವರಿಗೆ ನೀಡಬೇಕು. ಈದ್ ದಿನಕ್ಕಿಂತ ಒಂದು ಅಥವಾ ಎರಡು ದಿನ ಮುಂಚೆ, ಅಂದರೆ ಇಪ್ಪತ್ತೆಂಟನೇ ದಿನದಿಂದ ಇದನ್ನು ನೀಡಬಹುದು.

ಫಿತ್ರ್ ಝಕಾತ್ ಕಡ್ಡಾಯವಿರುವವರು ಈದ್ ದಿನ-ಕ್ಕಿಂತ ಎರಡು ಅಥವಾ ಹೆಚ್ಚು ದಿನ ಮುಂಚೆ ಪ್ರಯಾಣ ಹೊರಟರೆ ತಾವು ಪ್ರಯಾಣ ಮಾಡುವ ಮುಸ್ಲಿಮ್ ದೇ-

ಶಗಳಲ್ಲಿ ಅದನ್ನು ನೀಡಬೇಕು. ಅದು ಮುಸ್ಲಿಮ್ ದೇಶ ಅಲ್ಲದಿದ್ದಲ್ಲಿ ಅಲ್ಲಿರುವ ಮುಸ್ಲಿಮರನ್ನು ಹುಡುಕಿ ಅವರಿಗೆ ನೀಡಬೇಕು.

ಪ್ರಯಾಣ ಹೊರಡುವುದು ಇಪ್ಪತ್ತೆಂಟನೇ ದಿನ ಅಥವಾ ಅದರ ನಂತರವಾದರೆ ಊರಿನಲ್ಲಿರುವ ಬಡ-ವರಿಗೇ ಅದನ್ನು ನೀಡಬೇಕು. ಕಾರಣ, ಫಿತ್ರ್ ಝಕಾತಿನ ಉದ್ದೇಶ ಈದ್‌ನ ದಿನ ಮುಸಲ್ಮಾನರು ಹಸಿವಿನಿಂದ ಇತರರ ಮುಂದೆ ಕೈ ಚಾಚದಂತೆ ಅವರಿಗೆ ಸಹಾಯ ಮಾಡುವುದಾಗಿದೆ.

ಈದ್ ನಮಾಝ್‌ನ ವಿಧಿಯೇನು?

ಈದ್ ನಮಾಝ್‌ನ ವಿಧಿಯೇನು?

ಈದ್ ನಮಾಝ್ ಫರ್ದ್ ಕಿಫಾಯ (ಸಾಮಾಜಿಕ ಬಾಧ್ಯತೆ) ಎಂದು ಅನೇಕ ವಿದ್ವಾಂಸರು ಅಭಿಪ್ರಾಯ-ಪಟ್ಟಿದ್ದಾರೆ. ಸಮಾಜದ ಕೆಲವು ಸದಸ್ಯರು ಅದನ್ನು ನಿ-

ರ್ವಹಿಸಿದರೆ ಉಳಿದವರು ತಪ್ಪಿತಸ್ಥರಾಗುವುದಿಲ್ಲ. ಆದರೆ ಸಮಾಜದಲ್ಲಿರುವ ಯಾರೂ ಅದನ್ನು ನಿರ್ವಹಿಸದಿದ್ದರೆ ಎಲ್ಲರೂ ತಪ್ಪಿತಸ್ಥರಾಗುತ್ತಾರೆ.

ಆದರೆ ಈದ್ ನಮಾಝ್‌ಗೆ ಹಾಜರಾಗುವುದು ಮತ್ತು ಮುಸ್ಲಿಮ್ ಸಹೋದರರೊಂದಿಗೆ ಪ್ರಾರ್ಥನೆಯಲ್ಲಿ ಭಾ-ಗಿಯಾಗುವುದು ಪ್ರಬಲ ಸುನ್ನತ್ ಆಗಿದೆ. ಧರ್ಮಸಮ್ಮತ ರಿಯಾಯಿತಿಯ ಹೊರತು ಅದನ್ನು ಬಿಟ್ಟುಬಿಡುವುದು ಸರಿಯಲ್ಲ.

ಕೆಲವು ವಿದ್ವಾಂಸರ ಅಭಿಪ್ರಾಯ ಪ್ರಕಾರ ಈದ್ ನಮಾಝ್ ಜುಮುಅ ನಮಾಝಿನಂತೆ ಫರ್ದ್ ಐನ್ (ವೈಯುಕ್ತಿಕ ಬಾಧ್ಯತೆ) ಆಗಿದೆ. ಅಂದರೆ ಅದು ಪ್ರತಿ-ಯೊಬ್ಬರ ಮೇಲೂ ಕಡ್ಡಾಯವಾಗಿದೆ. ಧರ್ಮ ನಿಯ-ಮವನ್ನು ಪಾಲಿಸಲು ಬದ್ಧರಾಗಿರುವ, ಸ್ವತಂತ್ರರಾದ, ಊರಿನಲ್ಲಿರುವ ಪುರುಷರು ಅದನ್ನು ತಪ್ಪಿಸಬಾರದು. ಪುರಾವೆಗಳ ಆಧಾರದಲ್ಲಿ ಈ ಅಭಿಪ್ರಾಯವು ಸ್ಪಷ್ಟವೂ

ಸರಿಯೂ ಆಗಿದೆ.

ಮಹಿಳೆಯರು ಕೂಡ ಈದ್ ನಮಾಝ್‌ನಲ್ಲಿ ಪಾಲ್ಗೊಳ್ಳುವುದು ಸುನ್ನತ್ತಾಗಿದೆ. ಆದರೆ ಅವರು ಹಿಜಾಬ್ ಪಾಲಿಸಬೇಕು ಮತ್ತು ಸುಗಂಧ ಹಚ್ಚಬಾರದು. ಅಲ್‌ಬುಖಾರಿ ಮತ್ತು ಮುಸ್ಲಿಮ್‌ನಲ್ಲಿರುವ ಹದೀಸಿನಲ್ಲಿ ಉಮ್ಮು ಅತಿಯ್ಯ(ರ) ಹೇಳುತ್ತಾರೆ:

أُمِرْنَا أَنْ نُخْرِجَ فِي الْعِيدَيْنِ الْعَوَاتِقَ وَالْحُيَّضَ لِيَشْهَدْنَ الْخَيْرَ وَدَعْـوَةَ الْمُسْلِمِينَ. وَيَعْتَزِلُ الْحُيَّضُ الْمُصَلَّى.

“ಎರಡು ಈದ್ ಹಬ್ಬಗಳಲ್ಲಿ ತರುಣಿಯರನ್ನು ಮತ್ತು ಮುಟ್ಟಾಗಿರುವ ಮಹಿಳೆಯರನ್ನು ಈದ್ಗಾಹ್‌ಗೆ ಒಯ್ದು ಅವರು ಒಳಿತಿನಲ್ಲಿ ಮತ್ತು ಮುಸ್ಲಿಮರ ಪ್ರಾರ್ಥನೆಯಲ್ಲಿ ಭಾಗಿಯಾಗುವಂತೆ ಮಾಡಬೇಕೆಂದು ನಮಗೆ ಆಜ್ಞಾಪಿಸಲಾಗಿದೆ. ಆದರೆ ಮುಟ್ಟಾಗಿರುವ ಮಹಿಳೆಯರು

ನಮಾಝ್‌ನ ಸ್ಥಳದಿಂದ ದೂರವಿರಬೇಕು."

ಇತರ ಕೆಲವು ವರದಿಗಳಲ್ಲಿ:

فَقَالَتْ إِحْدَاهُنَّ: يَا رَسُولَ اللَّهِ! لَا تَجِدْ إِحْدَانَا جِلْبَابًا تَخْرُجُ فِيهِ. فَقَالَ صَلَّى اللَّهُ عَلَيْهِ وَسَلَّمَ: «لِتُلْبِسْهَا أُخْتُهَا مِنْ جِلْبَابِهَا».

ಆಗ ಅವರಲ್ಲೊಬ್ಬಳು ಹೇಳಿದಳು: "ಓ ಅಲ್ಲಾಹನ ಸಂದೇಶವಾಹಕರೇ! ಈದ್ಗಾಹ್‌ಗೆ ತೆರಳಲು ನಮ್ಮಲ್ಲಿ ಎಲ್ಲರಿಗೂ ಜಿಲ್ಬಾಬ್ ಇಲ್ಲವಲ್ಲ." ಆಗ ಪ್ರವಾದಿ(ಸ) ರವರು ಹೇಳಿದರು: "ಜಿಲ್ಬಾಬ್ ಇಲ್ಲದವಳಿಗೆ ಆಕೆಯ ಸಹೋದರಿ ಒಂದು ಜಿಲ್ಬಾಬ್ ತೊಡಿಸಲಿ."

ಒಳಿತಿನಲ್ಲಿ ಮತ್ತು ಮುಸ್ಲಿಮರ ಪ್ರಾರ್ಥನೆಯಲ್ಲಿ ಭಾಗಿಯಾಗಲು ಮಹಿಳೆಯರು ಎರಡು ಈದ್ ದಿನಗಳಲ್ಲಿ ಈದ್ಗಾಹ್‌ಗೆ ತೆರಳುವುದು ಪ್ರಬಲ ಸುನ್ನತ್ ಆಗಿದೆಯೆಂ-

ದು ಈ ಹದೀಸ್ ಸೂಚಿಸುತ್ತದೆ. ಇದರಲ್ಲಿ ಯಾವುದೇ ಸಂಶಯವಿಲ್ಲ.

ಶವ್ವಾಲ್ ತಿಂಗಳ ಆರು ದಿನಗಳ ಉಪವಾಸ:

ಶವ್ವಾಲ್ ತಿಂಗಳ ಆರು ದಿನಗಳ ಉಪವಾಸ ಆಚರಿಸುವುದಕ್ಕೆ ಮುಂಚೆ ರಮದಾನ್‌ನಲ್ಲಿ ಬಿಟ್ಟುಹೋದ ಉಪವಾಸಗಳನ್ನು ಕಝಾ ನಿರ್ವಹಿಸಬೇಕೇ?

ಉತ್ತರ: ಧರ್ಮನಿಯಮದ ಪ್ರಕಾರ ರಮದಾನ್‌ನಲ್ಲಿ ಬಿಟ್ಟುಹೋದ ಉಪವಾಸಗಳನ್ನು ಮೊದಲು ಕಝಾ ನಿರ್ವಹಿಸಬೇಕು. ಕಾರಣ, ಪ್ರವಾದಿ(ಸ) ರವರು ಹೇಳುತ್ತಾರೆ:

«مَنْ صَامَ رَمَضَانَ، ثُمَّ أَتْبَعَهُ سِتًّا مِنْ شَوَّالٍ، كَانَ كَصِيَامِ الدَّهْرِ».

“ರಮದಾನ್ ತಿಂಗಳ ಉಪವಾಸವನ್ನು ಆಚರಿಸಿ, ನಂತರ ಶವ್ವಾಲ್ ತಿಂಗಳ ಆರು ಉಪವಾಸಗಳೊಂದಿಗೆ ಅದನ್ನು

ಹಿಂಬಾಲಿಸಿದರೆ ವರ್ಷಪೂರ್ತಿ ಉಪವಾಸ ಆಚರಿಸಿದ ಪುಣ್ಯ ಸಿಗುತ್ತದೆ.” (ಮುಸ್ಲಿಂ)

ಆರು ದಿನಗಳ ಉಪವಾಸ ರಮದಾನ್ ತಿಂಗಳ ಉಪವಾಸದ ಬಳಿಕ ಆಗಿರಬೇಕೆಂದು ಪ್ರವಾದಿ(ಸ) ರವರು ವಿವರಿಸಿದ್ದಾರೆ. ಆದ್ದರಿಂದ ಈ ಹದೀಸಿನ ಪ್ರಕಾರ ಶವ್ವಾಲ್ ತಿಂಗಳ ಆರು ಉಪವಾಸಗಳು ನಷ್ಟವಾದರೂ ಸಹ, ರಮದಾನ್ ತಿಂಗಳ ಬಿಟ್ಟುಹೋದ ಉಪವಾಸಗಳನ್ನು ಮೊದಲು ಕಝಾ ನಿರ್ವಹಿಸಲು ಆತುರಪಡುವುದು ಕಡ್ಡಾಯವಾಗಿದೆ. ಕಾರಣ, ಸುನ್ನತ್‌ಗಿಂತಲೂ ಫರ್ದ್‌ಗೆ ಪ್ರಾಶಸ್ತ್ಯ ನೀಡಬೇಕಾಗಿದೆ.

ಲೈಲತುಲ್ ಕದ್ರ್:

ಲೈಲತುಲ್ ಕದ್ರನ್ನು ಕಣ್ಣಿಂದ ನೋಡಲು ಸಾಧ್ಯವೇ? ಅಂದರೆ ಮನುಷ್ಯನ ನಗ್ನ ನೇತ್ರಗಳಿಂದ ಅದನ್ನು ನೋಡಲು ಸಾಧ್ಯವೇ? ಕೆಲವು ಜನರು, “ಮನುಷ್ಯನಿಗೆ

ಲೈಲತುಲ್ ಕದ್ರನ್ನು ನೋಡಲು ಸಾಧ್ಯವಾದರೆ ಅವನು ಆಕಾಶದಲ್ಲಿ ಬೆಳಕನ್ನು ಕಾಣುತ್ತಾನೆ” ಎಂದಿತ್ಯಾದಿ ಹೇಳುತ್ತಾರೆ. ಪ್ರವಾದಿ(ಸ) ರವರು ಮತ್ತು ಸಹಾಬಾಗಳು ಅದನ್ನು ಹೇಗೆ ಕಂಡಿದ್ದರು? ತಾನು ಲೈಲತುಲ್ ಕದ್ರನ್ನು ಕಂಡಿದ್ದೇನೆಂದು ಒಬ್ಬ ವ್ಯಕ್ತಿಗೆ ತಿಳಿಯುವುದು ಹೇಗೆ? ಲೈಲತುಲ್ ಕದ್ರನ್ನು ನೋಡಲು ಸಾಧ್ಯವಾಗದಿದ್ದರೂ ಆ ರಾತ್ರಿಯ ಪುಣ್ಯ ಮತ್ತು ಪ್ರತಿಫಲವನ್ನು ಪಡೆಯಲು ಸಾಧ್ಯವೇ? ಪುರಾವೆ ಸಹಿತ ಇದನ್ನು ವಿವರಿಸಬೇಕೆಂದು ಬಯಸುತ್ತೇನೆ.

ಉತ್ತರ: ಅಲ್ಲಾಹು ತೌಫೀಕ್ ನೀಡಿದರೆ ಲೈಲತುಲ್ ಕದ್ರನ್ನು ನೋಡಲು ಸಾಧ್ಯವಿದೆ. ಅಂದರೆ ಅದರ ಚಿಹ್ನೆಗಳನ್ನು ನೋಡುವ ಮೂಲಕ. ಸಹಾಬಾಗಳು ಅನೇಕ ಚಿಹ್ನೆಗಳ ಮೂಲಕ ಅದಕ್ಕೆ ಪುರಾವೆ ತೋರಿಸುತ್ತಿದ್ದರು. ಆದರೆ ಲೈಲತುಲ್ ಕದ್ರನ್ನು ನೋಡಲಿಲ್ಲವೆಂಬ ಕಾರಣದಿಂದ ಆ ರಾತ್ರಿಯಲ್ಲಿ ವಿಶ್ವಾಸ ಮತ್ತು ಪ್ರತಿಫಲಾಪೇಕ್ಷೆಯಿಂದ

ನಮಾಝ್ ಮಾಡುವವರಿಗೆ ಅದರ ಶ್ರೇಷ್ಠತೆಯು ನಷ್ಟ-ವಾಗುವುದಿಲ್ಲ.

ಪ್ರವಾದಿ(ಸ) ರವರು ಅವರ ಸಹಾಬಾಗಳಿಗೆ ಆಜ್ಞಾಪಿ-ಸಿದಂತೆ ಮುಸಲ್ಮಾನರು ರಮದಾನ್ ತಿಂಗಳ ಕೊನೆಯ ಹತ್ತರಲ್ಲಿ ಪ್ರತಿಫಲ ಮತ್ತು ಪುಣ್ಯವನ್ನು ಅಪೇಕ್ಷಿಸುತ್ತಾ ಲೈಲತುಲ್ ಕದ್ರನ್ನು ಹುಡುಕಲು ಪರಿಶ್ರಮಿಸಬೇಕು. ಅ ರಾತ್ರಿಯಲ್ಲಿ ವಿಶ್ವಾಸ ಮತ್ತು ಪ್ರತಿಫಲಾಪೇಕ್ಷೆಯಿಂದ ನಮಾಝ್ ಮಾಡುವವರಿಗೆ ಅದರ ಪ್ರತಿಫಲ ಸಿಗುತ್ತ-ದೆ. ಅದು ಲೈಲತುಲ್ ಕದ್ರ್‌ನ ರಾತ್ರಿಯೆಂದು ಅವರಿಗೆ ತಿಳಿಯದಿದ್ದರೂ ಸಹ.

ಪ್ರವಾದಿ(ಸ) ಹೇಳುತ್ತಾರೆ:

«مَنْ قَامَ لَيْلَةَ الْقَدْرِ إِيمَانًا وَاحْتِسَابًا غُفِرَ لَهُ مَا تَقَدَّمَ مِنْ ذَنْبِهِ».

“ಲೈಲತುಲ್ ಕದ್ರ್‌ನ ರಾತ್ರಿ ವಿಶ್ವಾಸ ಮತ್ತು ಪ್ರತಿಫಲಾಪೇಕ್ಷೆಯಿಂದ ನಮಾಝ್ ಮಾಡುವವರಿಗೆ ಅವರ ಗತ ಪಾಪಗಳನ್ನು ಕ್ಷಮಿಸಲಾಗುತ್ತದೆ.” (ಅಲ್‌ಬುಖಾರಿ ಮತ್ತು ಮುಸ್ಲಿಂ)

ಅಲ್‌ಬುಖಾರಿ ಮತ್ತು ಮುಸ್ಲಿಂ ಅಲ್ಲದ ಬೇರೆ ಗ್ರಂಥದಲ್ಲಿರುವ ವರದಿಯಲ್ಲಿ ಹೀಗಿದೆ:

«مَنْ قَامَهَا ابْتِغَاءَهَا ثُمَّ وُفِّقَتْ لَهُ غُفِرَ لَهُ مَا تَقَدَّمَ مِنْ ذَنْبِهِ وَمَا تَأَخَّرَ».

“ಆ ರಾತ್ರಿಯನ್ನು ಹುಡುಕುತ್ತಾ ನಮಾಝ್ ಮಾಡುವವರಿಗೆ ಆ ರಾತ್ರಿ ಸಿಕ್ಕಿದರೆ ಅವರ ಗತ ಮತ್ತು ಮುಂಬರುವ ಪಾಪಗಳನ್ನು ಕ್ಷಮಿಸಲಾಗುತ್ತದೆ.” (ಅಹ್ಮದ್)

ಆ ದಿನ ಬೆಳಗ್ಗೆ ಸೂರ್ಯನು ಕಿರಣಗಳಿಲ್ಲದೆ ಉದಯವಾಗುವುದು ಆ ರಾತ್ರಿಯ ಚಿಹ್ನೆಯೆಂದು ಪ್ರವಾದಿ(ಸ)

ರವರು ಹೇಳಿದ್ದಾಗಿ ವರದಿಯಾಗಿದೆ. ಅದು ಇಪ್ಪತ್ತೇಳ-ನೇ ರಾತ್ರಿಯೆಂದು ಉಬೈ ಇಬ್ನ್ ಕಅ್‌ಬ್(ಸ) ಆಣೆ ಹಾಕಿ ಹೇಳುತ್ತಿದ್ದರು. ಅವರು ಅದಕ್ಕೆ ಈ ಚಿಹ್ನೆಯನ್ನು ಪುರಾ-ವೆಯಾಗಿ ತೋರಿಸುತ್ತಿದ್ದರು.

ಆದರೆ ಪ್ರಬಲ ಅಭಿಪ್ರಾಯದ ಪ್ರಕಾರ ಆ ರಾತ್ರಿ ಕೊನೆಯ ಹತ್ತರಲ್ಲಿ ಬದಲಾಗುತ್ತಾ ಇರುತ್ತದೆ. ವಿಶೇ-ಷವಾಗಿ ಬೆಸ ಸಂಖ್ಯೆಯ ರಾತ್ರಿಗಳಲ್ಲಿ. ಇಪ್ಪತ್ತೇಳನೇ ರಾತ್ರಿ ಬೆಸ ಸಂಖ್ಯೆಯಲ್ಲಿರುವುದರಿಂದ ಲೈಲತುಲ್ ಕದ್ರ್ ಆಗಿರುವ ಸಾಧ್ಯತೆ ಹೆಚ್ಚಿದೆ.

ಎಲ್ಲ ಹತ್ತು ರಾತ್ರಿಗಳಲ್ಲೂ ನಮಾಝ್, ಕುರ್‌ಆನ್ ಪಾರಾಯಣ, ಪ್ರಾರ್ಥನೆ ಇತ್ಯಾದಿ ಒಳಿತಿನ ಕಾರ್ಯಗ-ಳಲ್ಲಿ ತಲ್ಲೀನರಾಗುವವರು ಲೈಲತುಲ್ ಕದ್ರನ್ನು ಪಡೆದೇ ತೀರುವರು ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ಅಂದರೆ ಅವರು ವಿಶ್ವಾಸ ಮತ್ತು ಪ್ರತಿಫಲಾಪೇಕ್ಷೆಯಿಂದ ನಮಾಝ್ ಮಾಡಿದ್ದರೆ ಅಲ್ಲಾಹು ವಾಗ್ದಾನ ಮಾಡಿದ್ದ-

ನ್ನು ಅವರು ಪಡೆದುಕೊಳ್ಳುವರು. ಸೌಭಾಗ್ಯವನ್ನು ದಯ-ಪಾಲಿಸುವವನು ಅಲ್ಲಾಹು. ನಮ್ಮ ಪ್ರವಾದಿ ಮುಹಮ್ಮ-ದ್(ಸ) ರವರ ಮೇಲೆ, ಅವರ ಕುಟುಂಬದ ಮೇಲೆ ಮತ್ತು ಅವರ ಸಹಾಬಾಗಳೆಲ್ಲರ ಮೇಲೆ ಅಲ್ಲಾಹನ ಸಲಾತ್ ಮತ್ತು ಸಲಾಂ ಇರಲಿ.

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014

MOB: 9731593091 / 9945171612

Jamiyathe Ahle Hadees
Mangalore